(ಇ) ಆಯ್ಕೆ ಸಮಿತಿಯು ಸ್ಪೆಷಲಿಷ್ಟ್/ಕನ್ಸ್‌ಲ್ಟೆಂಟ್‌ರವರ ಕಾರ್ಯನಿರ್ವಹಣೆ ಮತ್ತು ಅವರಿಗೆ ವಹಿಸಲಾಗುವ ಕಾರ್ಯಚಟುವಟಿಕೆಗಳ ಕುರಿತು ಅವರೊಂದಿಗೆ ಸಮಾಲೋಚಿಸುವುದು. ಸಂಸ್ಥೆಯ ಹಿತದೃಷ್ಟಿಯಿಂದ ಸ್ಪೆಷಲಿಷ್ಟ್/ ಕನ್ಸ್‌ಲ್ಟೆಂಟ್‌ರವರ ಪರಿಣಿತಿಯನ್ನು ಗರಿಷ್ಟಮಟ್ಟದಲ್ಲಿ ಉಪಯೋಗ ಪಡೆಯಲು ಇಲಾಖಾ ಮುಖ್ಯಸ್ಥರು/ಅಧಿಕಾರಿ ವರ್ಗ ಮತ್ತು ಬೋಧಕ ಸಿಬ್ಬಂದಿಯವರು ಸಹಕರಿಸತಕ್ಕದ್ದು.

6. **ಬೋಧಕ ಸಿಬ್ಬಂದಿ ಮಾದರಿ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ:**

(1) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಅನುಮೋದಿಸಿರುವ ಫಿಸಿಯೋಥೆರಪಿ ಪದವಿ (ಬಿ.ಪಿ.ಟಿ.) (ಪರಿಷ್ಕೃತ) ನಿಯಮಗಳು 2016 ಮತ್ತು ಫಿಸಿಯೋಥೆರಪಿ ಸ್ನಾತಕೋತ್ತರ ಪದವಿ(ಎಂ.ಪಿ.ಟಿ.) (ಪರಿಷ್ಕೃತ) ನಿಯಮಗಳು 2016ರಲ್ಲಿ ಬಿ.ಪಿ.ಟಿ. ಮತ್ತು ಎಂ.ಪಿ.ಟಿ. ಕೋರ್ಸುಗಳಿಗೆ ಅನ್ವಯವಾಗುವಂತೆ ಕನಿಷ್ಠ ಸಿಬ್ಬಂದಿ ಮಾದರಿಯನ್ನು ನಿಗದಿಪಡಿಸಲಾಗಿದೆ.

(2) ಈ ನಿಯಮಗಳಲ್ಲಿ 60 ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಸಂಖ್ಯೆಯನ್ನು ಹೊಂದಿರುವ ಫಿಸಿಯೋಥೆರಪಿ ಪದವಿ (ಬಿ.ಪಿ.ಟಿ.) ಕೋರ್ಸಿಗೆ ಸಂಬಂಧಿಸಿದಂತೆ ಬೋಧಕ ಸಿಬ್ಬಂದಿ ಮತ್ತು ಇತರೆ ಸಿಬ್ಬಂದಿ ಸಂಖ್ಯೆಯನ್ನು ಸ್ಪೆಷಾಲಿಟಿಗಳೊಂದಿಗೆ ನಿಗದಿಪಡಿಸಲಾಗಿದೆ. ಈ ಸಿಬ್ಬಂದಿ ಮಾದರಿಯನ್ನು ಕೆಂಪೇಗೌಡ ಫಿಸಿಯೋಥೆರಪಿ ಸಂಸ್ಥೆಯಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಅನ್ವಯಿಸತಕ್ಕದ್ದಾಗಿದೆ. ಸ್ನಾತಕೋತ್ತರ ಫಿಸಿಯೋಥೆರಪಿ ಪದವಿ(ಎಂ.ಪಿ.ಟಿ.) ಕೋರ್ಸಿಗೆ ಸಂಬಂಧಿಸಿದಂತೆ ಬೋಧಕ ಸಿಬ್ಬಂದಿ ಮಾದರಿ ಬಗ್ಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ.

(ಅ) ಫಿಸಿಯೋಥೆರಪಿ ಕಾಲೇಜಿನಲ್ಲಿನ ಬೋಧಕರು ಎಂ.ಪಿ.ಟಿ. ಸ್ನಾತಕೋತ್ತರ ಪದವಿ ಪಡೆದ ನಂತರ 5 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದಲ್ಲಿ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಬೋಧನಾ ಸಿಬ್ಬಂದಿಯೆಂದು ಅಂಗೀಕರಿಸಲ್ಪಟ್ಟಿದ್ದಲ್ಲಿ, ಅಂತಹ ಸಿಬ್ಬಂದಿಯು ಸಂಬಂಧಿಸಿದ ಸ್ಪೆಷಾಲಿಟಿಯಲ್ಲಿ ಫಿಸಿಯೋಥೆರಪಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಬೋಧಿಸಲು ಅರ್ಹತೆ ಹೊಂದಿರುತ್ತಾರೆ.

(ಆ) ಈ ರೀತಿ ಅರ್ಹತೆ ಪಡೆದಿರುವ ಯಾವುದೇ ಸ್ನಾತಕೋತ್ತರ ಬೋಧನಾ ಸಿಬ್ಬಂದಿಯು 1 ವರ್ಷದಲ್ಲಿ 3 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ(ಪಿ.ಜಿ. ವಿದ್ಯಾರ್ಥಿಗಳು) ಬೋಧಿಸಬಹುದಾಗಿದೆ( P.G.Guide).

(3) ಆದುದರಿಂದ, ಕೆಂಪೇಗೌಡ ಫಿಸಿಯೋಥೆರಪಿ ಸಂಸ್ಥೆಯಲ್ಲಿನ ಫಿಸಿಯೋಥೆರಪಿ ಪದವಿ(ಬಿ.ಪಿ.ಟಿ.) ಕೋರ್ಸಿನ 60 ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾಗಿರುವ ಸಂಖ್ಯೆಯಲ್ಲಿರುವ ಬೋಧನಾ ಸಿಬ್ಬಂದಿಯು ಸಂಸ್ಥೆಯಲ್ಲಿನ ಫಿಸಿಯೋಥೆರಪಿ ಸ್ನಾತಕೋತ್ತರ ಪದವಿ ಕೋರ್ಸಿನ(ಎಂ.ಪಿ.ಟಿ.) ಅನುಮೋದಿಸಲಾದ 20 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬೋಧಕ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸಬಹುದಾಗಿದೆ. ಹೆಚ್ಚುವರಿ ಬೋಧನಾ ಸಿಬ್ಬಂದಿಯ ಅವಶ್ಯಕತೆಯಿರುವುದಿಲ್ಲ.

(4) ಕೆಂಪೇಗೌಡ ಫಿಸಿಯೋಥೆರಪಿ ಸಂಸ್ಥೆಗೆ ಅವಶ್ಯವಿರುವ ಬೋಧಕೇತರ ಸಿಬ್ಬಂದಿಯು ಸಹ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಿಗದಿಪಡಿಸಿದ ಸಿಬ್ಬಂದಿ ಮಾದರಿಯಲ್ಲಿ ಇರತಕ್ಕದ್ದಾಗಿದೆ.

(5) ಈ ಹಿನ್ನೆಲೆಯಲ್ಲಿ ಕೆಂಪೇಗೌಡ ಫಿಸಿಯೋಥೆರಪಿ ಸಂಸ್ಥೆಗೆ ನಿಯಮಾನುಸಾರ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಂಖ್ಯೆಯನ್ನು ನಿಗದಿಪಡಿಸಿ ಷೆಡ್ಯೂಲ್-1 ರಲ್ಲಿ ಅಳವಡಿಸಲಾಗಿದೆ.

